**ಡಿ. ಡಬ್ಲ್ಯೂಃ 1**

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 19-04-2025)

ಮುಂದುವರೆದ ಪಾಟೀ ಸವಾಲು : ವಾದಿ ಪರ ಶ್ರೀ ಎನ್ ಎಸ್ ಆರ್ ಬಿ ವಕೀಲರಿಂದ,

ಈ ಹಿಂದೆ ದಾಖಲಿಸಿದ ಪಾಲುಪಟ್ಟಿಯ ದಾವೆಯು ಪ್ರತಿವಾದಿಗಳು ಪ್ರತಿವಾದ ಪತ್ರವನ್ನು ದಾಖಲಿಸುವ ಪೂರ್ವದಲ್ಲೇ ವಾದಿ ಪ್ರತಿವಾದಿಗಳು ಸೇರಿ ರಾಜಿ ಮಾಡಿಕೊಂಡು ರಾಜಿ ಡಿಕ್ರಿ ಪಡೆದಿರುತ್ತೇವೆ ಎಂದರೆ ಸರಿ. ಸದ್ರಿ ದಾವೆಯಲ್ಲಿ ಈ ದಾವೆಯ ವಾದಿಯನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ. ಸದ್ರಿ ಪಾಲುಪಟ್ಟಿಯ ದಾವೆಯಲ್ಲಿ ವಾದಿಯನ್ನು ಪಕ್ಷಗಾರರನ್ನಾಗಿ ಮಾಡದೇ ಇರಲು ಯಾವುದೇ ವಿಶೇಷ ಕಾರಣ ಇರುವುದಿಲ್ಲ. ಸದ್ರಿ ಪಾಲುಪಟ್ಟಿಯ ದಾವೆಯಲ್ಲಿ ದಾವಾ ಸ್ಥಳದಲ್ಲಿ ವಾಸ ಇರುವ ವ್ಯಕ್ತಿಗಳನ್ನು ಸಹ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಆ ರೀತಿ ಸದ್ರಿಯವರನ್ನು ಪಕ್ಷಗಾರರನ್ನಾಗಿ ಮಾಡದೇ ಇರಲು ಯಾವುದೇ ವಿಶೇಷ ಕಾರಣ ಇರುವುದಿಲ್ಲ. ಸದ್ರಿ ಪಾಲುಪಟ್ಟಿಯ ದಾವೆಯಲ್ಲಿ ಈ ದಾವಾ ಆಸ್ತಿಯ ಕುರಿತ ನೋಂದಣಿ ದಾಖಲಾತಿಗಳನ್ನು ಹಾಜರುಪಡಿಸದೇ ಇರಲು ಯಾವುದೇ ವಿಶೇಷ ಕಾರಣ ಇರುವುದಿಲ್ಲ. ಸದ್ರಿ ಪಾಲುಪಟ್ಟಿಯ ದಾವೆಯಲ್ಲಿ ಈ ದಾವೆಯ ದಾವಾ ಆಸ್ತಿಯನ್ನು ಹೇಗಾದರೂ ಮಾಡಿ ನಮ್ಮ ಹೆಸರಿಗೆ ಮಾಡಿಕೊಳ್ಳಬೇಕೆಂಬ ದುರುದ್ದೇಶದಿಂದ ದಾವೆ ದಾಖಲಿಸಿ ರಾಜಿ ಡಿಕ್ರಿ ಪಡೆದಿರುತ್ತೇವೆ ಎಂದರೆ ಸಾಕ್ಷಿಯು ದಾವಾ ಆಸ್ತಿಯು ನಮ್ಮ ಆಸ್ತಿ ಎಂದು ತಿಳಿದು ಪಾಲುಪಟ್ಟಿ ದಾವೆಯನ್ನು ದಾಖಲಿಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ.

2. ಈ ದಾವೆ ದಾಖಲಿಸಿದ ನಂತರ ದಾವಾ ಆಸ್ತಿಯು ವಾದಿಗೆ ಪಾಲುಪಟ್ಟಿ ದಾವೆ ದಾಖಲಾಗುವ ಪೂರ್ವದಲ್ಲಿ ಕ್ರಯಪತ್ರ ಆದ ಆಸ್ತಿ ಎಂದು ನನಗೆ ತಿಳಿದುಬಂದಿರುವುದಿಲ್ಲ. ನಿಪಿ-4 ದಿನಾಂಕ 30.03.1985 ರ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ ಮತ್ತು ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದ್ರಿ ಕ್ರಯಪತ್ರದ ಬಗ್ಗೆ ಏನು ಗೊತ್ತಿಲ್ಲದೇ ಇದ್ದ ಕಾರಣ ಸದ್ರಿ ಕ್ರಯಪತ್ರದ ವಿಚಾರಗಳನ್ನು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಈ ದಾವೆ ದಾಖಲಾದ ನಂತರ ನಿಪಿ-4 ಕ್ರಯಪತ್ರದ ಬಗ್ಗೆ ನೋಂದಣಿ ಕಚೇರಿಯಿಂದ ಧೃಡಿಕೃತ ನಕಲನ್ನು ಪಡೆದು ಅದರ ಬಗ್ಗೆ ಪರಿಶೀಲಿಸಲು ಪ್ರಯತ್ನಪಟ್ಟಿರುವುದಿಲ್ಲ. ಆ ರೀತಿ ಪ್ರಯತ್ನ ಪಡದೇ ಯಾವುದೇ ಕಾರಣ ಇರುವುದಿಲ್ಲ.

3. ವಾದಿ ಈ ದಾವೆಯನ್ನು ಯಾಕೆ ದಾಖಲಿಸಿದ್ದಾರೆ ಎಂದು ತಿಳಿದುಕೊಂಡಿರುತ್ತೇನೆ. ಈ ದಾವೆಯಲ್ಲಿ ವಾದಿ ದಾವಾ ಸ್ಥಳವು ತಮ್ಮದು ಎಂದು ಹೇಳುತ್ತಿದ್ದಾರೆ. ಆ ರೀತಿ ಯಾವ ಆಧಾರದಲ್ಲಿ ವಾದಿ ತಮ್ಮ ಸ್ಥಳ ಎಂದು ಹೇಳುತ್ತಿದ್ದಾರೆ ಎಂಬ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಹಾಗಾಗಿ ನಿಪಿ-4 ನೋಂದಣಿ ಕ್ರಯಪತ್ರದ ಬಗ್ಗೆ ನನಗೆ ತಕರಾರು ಇರುವುದಿಲ್ಲ ಎಂದರೆ ಸರಿ. ನಿಪಿ-4

ಕ್ರಯಪತ್ರದ ಆಧಾರದಲ್ಲಿ ವಾದಿಗೆ ದಾವಾ ಆಸ್ತಿಯಲ್ಲಿ ಹಕ್ಕು ಪ್ರಾಪ್ತ ಆಗಿರುವುದರಿಂದ ಈ ಹಿಂದೆ ನಾವು ದಾಖಲಿಸಿದ ಪಾಲುಪಟ್ಟಿ ದಾವೆಯಲ್ಲಿ ಈ ದಾವಾ ಆಸ್ತಿಯನ್ನು ಸೇರಿಸಿಕೊಂಡು ರಾಜಿ ಡಿಕ್ರಿ ಪಡೆದುಕೊಂಡಿರುವುದು ಕಾನೂನುಬಾಹೀರ ಆಗಿರುತ್ತದೆ ಎಂದರೆ ಸರಿಯಲ್ಲ. ಅದು ನಮ್ಮದೇ ಆಸ್ತಿ ಆಗಿರುತ್ತದೆ. ನಿಪಿ–4 ಕ್ರಯಪತ್ರದ ಆಧಾರದಲ್ಲಿ ವಾದಿ ದಾವಾ ಅಸ್ತಿಯ ಕಬ್ಜಾ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ಹೇಳಿರುತ್ತಾರೆ. ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ವಾದಿ ಯಾರು ಎಂದು ತಿಳಿದಿರುವುದಿಲ್ಲ, ವಾದಿ ಯಾರು ಎಂದು ಕೇಳಿದಕ್ಕೆ ಹೌದು ಎಂದು ಉತ್ತರಿಸಿರುತ್ತಾರೆ ಎಂದು ತಕರಾರು ಮಾಡಿರುತ್ತಾರೆ. ಆದರೆ ಸಾಕ್ಷಿಯು ವಾದಿ ಪರ ವಕೀಲರ ಪ್ರಶ್ನೆಯನ್ನು ಕೇಳಿ ಹೌದು ಎಂದು ಉತ್ತರಿಸಿರುವುದು ಈ ನ್ಯಾಯಾಲಯದ ಗಮನಕ್ಕೆ ಬಂದಿರುತ್ತದೆ. ಹಾಗಾಗಿ ಪ್ರತಿವಾದಿಗಳ ತಕರಾರನ್ನು ತಳ್ಳಿಹಾಕಲಾಯಿತು. ನಿಪಿ–4 ಕ್ರಯಪತ್ರದ ಆಧಾರದಲ್ಲಿ ವಾದಿ ದಾವಾ ಆಸ್ತಿಯ ಕಬ್ಜಾ ಹೊಂದಿ ಅನುಭವಿಸಿ ಬರುತ್ತಿರುವುದಕ್ಕೆ ನನ್ನ ತಕರಾರು ಇರುತ್ತದೆ. ಹಾಗಾಗಿ ದಾವಾ ಆಸ್ತಿಯ ಕಬ್ಜಾವನ್ನು ನಮಗೆ ಬಿಟ್ಟುಕೊಡಬೇಕಾಗಿ ನಾನು ಸಾಧನೆ ಮಾಡುತ್ತಿದ್ದೇನೆ. ದಾವಾ ಆಸ್ತಿಯಲ್ಲಿ ನಮಗೆ ಹಕ್ಕು ಪ್ರಾಪ್ತ ಆಗದೇ ಇದ್ದರೂ ಸಹ ದಾವಾ ಆಸ್ತಿಯನ್ನು ನಾವು ಹಿಂದೆ ದಾಖಲಿಸಿದ ಪಾಲು ಪಟ್ಟಿ ದಾವೆಯಲ್ಲಿ ಮೋಸದಿಂದ ಸೇರಿಸಿ ಡಿಕ್ರಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಹಾಗಾಗೀ ಪ್ರತಿವಾದಿ 1, 3 ಮತ್ತು 5 ರವರಿಗೂ ಸಹ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಪ್ರಾಪ್ತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನತೆಯನ್ನು ವಾದಿಯಿಂದ ಪಡೆದುಕೊಳ್ಳಲು ಇವತ್ತಿನವರೆಗೂ ಯಾವುದೇ ದಾವೆ ಅಥವಾ ವ್ಯವಹರಣೆಯನ್ನು ಜರುಗಿಸಿದ್ದೀರಾ ಎಂದರೆ ಇಲ್ಲ. ಇನ್ನೂ ಮುಂದೆ ಆ ರೀತಿ ದಾವೆಯನ್ನು ಸಲ್ಲಿಸುವವರಿದ್ದೇವೆ. ಈ ದಾವೆಯಲ್ಲಿ ನಾನು ಮಾಡುತ್ತಿರುವ ಸಾಧನೆ ಸುಳ್ಳು ಆಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನನ್ನ, ಪ್ರತಿವಾದಿ 1 ಮತ್ತು 3 ರವರ ಸಾಧನೆ ಒಂದೇ ಆಗಿರುತ್ತದೆ. ನಾನು ಈ ದಾವೆಯಲ್ಲಿ 1 ಮತ್ತು 3 ನೇ ಪ್ರತಿವಾದಿಗಳ ಪರವಾಗಿಯೂ ಸಹ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಈ ದಾವೆಯಲ್ಲಿ ಕೇಳಿದ ಪರಿಹಾರಕ್ಕೆ ವಾದಿ ಅರ್ಹರಿರುತ್ತಾರೆ ಎಂದರೆ ಸರಿಯಲ್ಲ. ಹಾಗಾಗೀ ಈ ಮೇಲೆ ಹೇಳಿದಂತೆ ದಾವಾ ಆಸ್ತಿಯನ್ನು ಸೇರಿಸಿ ಪಡೆದ ಡಿಕ್ರಿಯು ದಾವಾ ಆಸ್ತಿಗೆ ಸಂಬಂಧಿಸಿದಂತೆ ರದ್ದಾಗಲು ಯೋಗ್ಯವಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**